**ಪ್ರಕಟಣೆಯ ಕೃಪೆಗಾಗಿ**

**ದಿನಾಂಕ: 12.12.2019**

**ಬೆಳಗಾವಿ ಜಿಲ್ಲೆಯ ನೆರೆಪೀಡಿತ ಪ್ರದೇಶದಲ್ಲಿ ಅದರ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಮಕ್ಕಳು ಹಾಗು ಸಮುದಾಯದವರ ಸಮಸ್ಯೆಗಳಿಗೆ ಎಲ್ಲಾ ಹಂತದ ಸರ್ಕಾರಗಳು ಕಿವಿಗೊಡಲೇಬೇಕು**

ಬೆಳಗಾವಿ ಜಿಲ್ಲೆಯಲ್ಲಿ ನೆರೆಯಿಂದ ತೀವ್ರವಾದ ಸಂಕಷ್ಟಕ್ಕೆ ಒಳಗಾದ 3 ತಾಲೂಕುಗಳಲ್ಲಿ ಕ್ಷೇತ್ರ ಭೇಟಿ ಮಾಡಿ ನಾವೇ ಸ್ವತಃ ಕಂಡುಕೊಂಡ ನೈಜ ಚಿತ್ರಣವನ್ನು ಮಾಧ್ಯಮದ ಮೂಲಕ ಗಮನ ಸೆಳೆದು ವಿವಿಧ ಹಂತದ ಸರ್ಕಾರಗಳ ಮುಂದೆ ಹಕ್ಕೊತ್ತಾಯದ ರೂಪದಲ್ಲಿ ಮಂಡಿಸುತ್ತಿದ್ದೇವೆ. ನಮ್ಮ ತಂಡದಲ್ಲಿ ನಾಲ್ಕು ದಶಕಗಳಿಂದ ದೇಶದಲ್ಲಿ ಮಕ್ಕಳ ಹಕ್ಕುಗಳ ವಿಷಯದಲ್ಲಿ ಮುಂಚೂಣಿಯಲ್ಲಿರುವ ಹಾಗೂ ಮೂರು ಬಾರಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಕೆಲಸಕ್ಕಾಗಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ನಾಮ ನಿರ್ದೇಶನಗೊಂಡಿರುವ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಕೂಲಿ ಕಾರ್ಮಿಕರ ಹಾಗೂ ಸಮುದಾಯದವರ ಹಕ್ಕಿಗಾಗಿ ಕೆಲಸ ಮಾಡುತ್ತಿರುವ ಮಹಿಳಾ ಜಾಗೃತಿ ಒಕ್ಕೂಟದ ಸದಸ್ಯರು ಹಾಗೂ ಗ್ರಾಮೀಣ ಕೂಲಿಕಾರ್ಮಿಕರ ಸಂಘಟಕರು ಇದ್ದೇವೆ.

ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಮಾಸ್ಕೇನಹಟ್ಟಿ ಹಾಗೂ ಮಂಗೇನಕೊಪ್ಪ ಪಂಚಾಯತ್‌ಗಳು, ಹುಕ್ಕೇರಿ ತಾಲೂಕಿನ ಪಾಶ್ಚಾಪುರ ಪಂಚಾಯತ್ ಹಾಗೂ ಮಣಗುತ್ತಿ ಗ್ರಾಮ ಪಂಚಾಯತ್‌ಗಳ ಮಕ್ಕಳು ಹಾಗೂ ಸಮುದಾಯದವರು, ಅದರಲ್ಲೂ ಹಿರಿಯ ನಾಗರಿಕರು ಈ ಕೆಳಗಿನ ಹಕ್ಕೊತ್ತಾಯಗಳನ್ನು ಮಾಡಿ ಸರ್ಕಾರದ ಅತ್ಯಂತ ಶೀಘ್ರ ಪ್ರತಿಕ್ರಿಯೆಗಾಗಿ ಎದುರು ನೋಡುತ್ತಿದ್ದಾರೆ. ಮಕ್ಕಳು ಮತ್ತು ಸಮುದಾಯದವರು ನೆರೆಯಿಂದ ಅನುಭವಿಸಿದ ಸಮಸ್ಯೆಗಳನ್ನು ನಾವು 4 ಮುಖ್ಯ ವಿಷಯಗಳಡಿಯಲ್ಲಿ ವಿಂಗಡಿಸಿ ಆ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಿರುವ ಮುಂದಿನ ಹಜ್ಜೆಗಳು ಹಾಗೂ ಅವುಗಳನ್ನು ನೆರವೇರಿಸಲು ಪೂರಕವಾಗಿರುವ ಕಾನೂನು ಹಾಗೂ ನೀತಿಗಳನ್ನು ಸೂಚಿಸಿದ್ದೇವೆ.

**ಈಗಿರುವ ಪರಿಸ್ಥಿತಿಯಲ್ಲಿ ಈ ಕೆಳಗಿನ ಎಲ್ಲಾ ಕಾಯ್ದೆಗಳು ಹಾಗು ನೀತಿಗಳು ಉಲ್ಲಂಘವಾಗುತ್ತಿವೆ. ಇದಕ್ಕೆ ಜಿಲ್ಲಾಡಳಿತ ಗಂಭೀರವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಅವು ಕೆಲವು ಯಾವುವು ಎಂದರೆ:**

| | |
|---|---|
| ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ | ರಾಜ್ಯ ವಿಕೋಪ ನಿರ್ವಹಣಾ ಯೋಜನೆ |
| ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ 2016 | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 |
| ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ, | ಅಂತರರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆ, |
| ರಾಷ್ಟ್ರೀಯ ಮಕ್ಕಳ ನೀತಿ | ರಾಜ್ಯ ಮಕ್ಕಳ ರಕ್ಷಣಾ ನೀತಿ |
| ಬಾಲ ಕಾರ್ಮಿಕ ಹದಿಹರೆಯದ ಕಾರ್ಮಿಕರ ಕಾಯ್ದೆ | ಬಾಲ್ಯ ವಿವಾಹ ನಿಷೇಧ ಕಾಯ್ದೆ |
| ಎನ್.ಕೆ ಪಾಟೀಲ್ ಅಪೌಷ್ಟಿಕತೆಯನ್ನು ನಿವಾರಣೆಗೆ ಸೂಚಿಸಿರುವ ಕಾರ್ಯತಂತ್ರ | ಆಹಾರ ಭದ್ರತಾ ಕಾಯ್ದೆ |
| ಕೆ.ಡಿ.ಪಿ ಸಭೆಯ ಆದೇಶ | ಕರ್ನಾಟಕ ಶಾಲೆಗಳ ಮಕ್ಕಳ ರಕ್ಷಣಾ ಮಾರ್ಗದರ್ಶಿ |

**ವಸತಿ:**

- *ಸಮಸ್ಯೆ:* ಪಾಶ್ಚಾಪುರದಲ್ಲಿ 280ಕ್ಕೂ ಹೆಚ್ಚು ಮನೆಗಳು ಸಂಪೂರ್ಣವಾಗಿ ಬಿದ್ದುಹೋಗಿವೆ. ಮನೆ ಹಾನಿಯಾಗಿರುವ ಅನೇಕರಿಗೆ ತಮ್ಮ ಸ್ಥಳದ ದಾಖಲಾತಿಗಳು ಸರಿಯಾಗಿ ಇಲ್ಲದಿರುವುದರಿಂದ ಅವರಿಗೆ ಯಾವುದೇ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಅವರಿಗೆ ಯಾವುದೇ ಕಾನೂನಾತ್ಮಕ ಸಲಹೆ ಅಥವಾ ಮಾರ್ಗದರ್ಶನ ಸಿಗುತ್ತಿಲ್ಲ. ಮನೆ ಕಳೆದುಕೊಂಡವರಲ್ಲಿ ಅನೇಕ ಹಿರಿಯ ನಾಗರಿಕರಿದ್ದಾರೆ. ಅವರಿಗೆ ಪ್ರತಿ ಹೆಜ್ಜೆಗೂ ಸಹಾಯ, ಬೆಂಬಲದ ಅತ್ಯಗತ್ಯವಿದ್ದು ಅವರಿಗೆ ಅದನ್ನು ಯಾರೂ ಒದಗಿಸುತ್ತಿಲ್ಲ. ಅವರಿಗೆ ಸಕಾಲಿಕ ಸಾಂತ್ವನ, ಸಹಾಯ ದೊರಕಿಲ್ಲ.
- ***ಪರಿಹಾರ:* ಮನೆ ಹಾನಿಗೆ ಸಂಬಧಿಸಿದ ಸಮೀಕ್ಷೆಯು ಸ್ಥಳೀಯ ಮಕ್ಕಳು, ಮಹಿಳೆಯರ ಮುಂದಾಳತ್ವದಲ್ಲಿ ನಡೆಯಬೇಕು. ಹಾಗಾದಲ್ಲಿ ಮಾತ್ರ ಪರಿಸ್ಥಿತಿಯ ನೈಜ ಚಿತ್ರಣ ಸಿಗುತ್ತದೆ. ಈಗ ಹಾನಿಯಾಗದಿದ್ದರೂ ಶಿಥಿಲವಾಗಿರುವ ಮನೆಗಳನ್ನು ಈ ವರ್ಗೀಕರಣದಲ್ಲಿ ಸೇರಿಸಬೇಕು. ಹಾನಿಯ ವರ್ಗೀಕರಣ ಯಾವ ಮಾನದಂಡದಲ್ಲಿ ಆಗಿದೆ ಎನ್ನುವ ಸ್ಪಷ್ಟೀಕರಣ ಈ ಮೇಲಿನ ತಂಡಕ್ಕೆ ಸ್ಪಷ್ಟವಾಗಬೇಕು. ಮನೆ ಹಾನಿಯಾಗಿರುವ ಕುಟುಂಬಕ್ಕೂ ಕೂಡ ತಮ್ಮ ಮನೆ ಯಾವ ವರ್ಗಕ್ಕೆ ಸೇರ್ಪಡೆಯಾಗಿದೆ ಮತ್ತು ಏಕೆ ಹಾಗೂ ಅವರಿಗೆ ಸಿಗಬೇಕಾದ ಪರಿಹಾರ ಧನದ ಮೊತ್ತದ ಆದೇಶ ಸಿಗಲೇಬೇಕು.**

- **ವಸತಿ ಹಾಗು ಸಮೀಕ್ಷೆಗೆ ಸಂಬಂಧಿಸಿದ ಸಮಸ್ಯೆಗಳು:**
  - *ಸಮಸ್ಯೆ:* ಸಮೀಕ್ಷೆ ಸಮರ್ಪಕವಾಗಿ ಆಗಿಲ್ಲ ಮತ್ತು ಕೆಲವು ಕಡೆ ಆಗಿಯೇ ಇಲ್ಲ. ಪರಿಹಾರ ನೀಡಲು ಮಾಡಿರುವ ವರ್ಗೀಕರಣದಲ್ಲಿ ಅನೇಕ ಸಮಸ್ಯೆಗಳಿವೆ ಮತ್ತು ವರ್ಗಿಕರಣ ಸ್ಪಷ್ಟವಾಗಿಲ್ಲ. ಕೆಲವು ಕಡೆ ಅತಿಯಾದ ಹಾನಿಯುಂಟಾದ ಮನೆಗಳಿಗೆ "ಸಿ" ಎಂದು, ಅಥವಾ ಕಡಿಮೆ ಹಾನಿಯಾದ ಮನೆಗಳನ್ನು "ಎ" ವರ್ಗೀಕರಣದಲ್ಲಿ ನಮೂದಿಸಲಾಗಿದೆ. ಹೆಚ್ಚಿನ ಜನರಿಗೆ ತಮ್ಮ ಮನೆಯನ್ನು ಯಾವ ವರ್ಗಕ್ಕೆ ಹಾಕಿದ್ದಾರೆ ಮತ್ತು ಯಾವ ಮಾನದಂಡದಲ್ಲಿ ಹಾಕಿದ್ದಾರೆ, ಎಷ್ಟು ಹಣ ಮಂಜೂರಾಗಬೇಕಿದೆ ಈ ಯಾವುದೇ ಮಾಹಿತಿ ಅವರಿಗೆ ಸಿಕ್ಕಿಲ್ಲ. ಕೆಲವು "ಎ" ವರ್ಗದಲ್ಲಿರುವ ಕುಟುಂಬದವರಿಗೆ ಮೊದಲನೆಯ ಕಂತಿನ ಒಂದು ಲಕ್ಷ ರೂಪಾಯಿ ಖಾತೆಗೆ ಜಮಾ ಆಗಿದೆ ಆದರೆ ಅನೇಕರಿಗೆ ಆಗಿಲ್ಲ. ನೆರೆಯಿಂದ ಈಗಾಗಲೇ ಶಿಥಿಲವಾಗಿರುವ ಕಟ್ಟಡಗಳನ್ನು ಯಾವುದೇ ವರ್ಗದಲ್ಲಿ ಗುರುತಿಸಿಲ್ಲ. ನರೇಗಾ ಕಾರ್ಯಕ್ರಮದಡಿಯಲ್ಲಿ "ಎ" ವರ್ಗೀಕರಣದಲ್ಲಿರುವ ಮನೆಗಳ ನಿರ್ಮಾಣಕ್ಕೆ ಅವಕಾಶವಿದೆ ಆದರೆ "ಬಿ" ಮತ್ತು "ಸಿ" ವರ್ಗೀಕರಣಕ್ಕೆ ಇಲ್ಲ.
  - ***ಪರಿಹಾರ:*** **ಕೆಲವು "ಎ" ವರ್ಗದಲ್ಲಿರುವ ಕುಟುಂಬದವರಿಗೆ ಮೊದಲನೆಯ ಕಂತಿನ ಒಂದು ಲಕ್ಷ ರೂಪಾಯಿ ಖಾತೆಗೆ ಜಮಾ ಆಗಿದೆ. ಕೆಲವರಿಗೆ ಸಿಕ್ಕಿಲ್ಲ. ನೆರೆಯಿಂದ ಈಗಾಗಲೇ ಶಿಥಿಲವಾಗಿರುವ ಕಟ್ಟಡಗಳನ್ನು ಹಾನಿಯಾಗಿರುವುದೆಂದು ಗುರುತಿಸಿರುವ ವರ್ಗೀಕರಣಕ್ಕೆ ಸೇರಿಸಿಕೊಳ್ಳಬೇಕು. ಪರಿಹಾರ ಧನ ಸಿಗದವರಿಗೆ ಶೀಘ್ರವಾಗಿ ಅದುಮಂಜೂರಾಗಬೇಕು. ಪರಿಹಾರಧನವನ್ನು ಪಡೆಯಲು ಕಾನೂನಿನ ತೊಡಕು ಇರುವವರಿಗೆ ಅಗತ್ಯವಿರುವ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಬೇಕು. ಹಿರಿಯ ನಾಗರಿಕರಿಗೆ ವಿಶೇಷವಾಗಿ ಸಹಕಾರ, ಜನಸಹಾಯ ಹಾಗೂ ಬೆಂಬಲ ಸಿಗಬೇಕು. ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ಸ್ಥಳೀಯ ಸರ್ಕಾರಗಳಿಂದ ವರದಿಯನ್ನು ಪಡೆದುಕೊಂಡು ಪರಿಹಾರ ಕಾರ್ಯವನ್ನು ಖಾತ್ರಿಪಡಿಸಿಕೊಳ್ಳಬೇಕು. ಮಕ್ಕಳೊಂದಿಗೆ ಸಂವಾದ ನಡೆಸಿ, ವಿಶೇಷ ಗಮನಹರಿಸಿ ಅವರಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಾಂತ್ವನ ಮತ್ತು ಬೆಂಬಲ ನೀಡಬೇಕು. ನರೇಗಾ ಕಾರ್ಯಕ್ರಮದಡಿಯಲ್ಲಿ "ಎ", "ಬಿ" ಮತ್ತು "ಸಿ" ವರ್ಗೀಕರಣದಲ್ಲಿರುವ ಮನೆಗಳಿಗೂ ಸಿಗಬೇಕು.**
- **ಭೂಮಿ (ಕೃಷಿ ಹಾಗು ವಸತಿ):**
  - *ಸಮಸ್ಯೆ:* ಅತ್ಯಂತ ವ್ಯಾಪಕವಾಗಿ ಕಬ್ಬು (ಹುಕ್ಕೇರಿ) ಭತ್ತ (ಖಾನಾಪೂರ) ನಾಶಹೊಂದಿವೆ. ಭೂಮಿ ಮತ್ತು ಬೆಳೆಯ ನಾಶದ ಕುರಿತಾಗಿ ಸಮೀಕ್ಷೆ ನಡೆದಿಲ್ಲ, ಅದಕ್ಕೆ ದೊರಕಬೇಕಾದ ಪರಿಹಾರದ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿಯಿಲ್ಲ. ಕೃಷಿ ಉತ್ಪನ್ನಗಳ ಹಾನಿಯನ್ನು ಯಾವ ಮಾನದಂಡದ ಮೇಲೆ ಗುರುತಿಸಿ ಪರಿಹಾರ ನಿಗಧಿ ಮಾಡುತ್ತಾರೆ ಎನ್ನುವ ಬಗ್ಗೆ ಮಾಹಿತಿಯಿಲ್ಲ.
  - ***ಪರಿಹಾರ:*** **ಭೂಮಿ ಹಾನಿ ಮತ್ತು ಬೆಳೆಹಾನಿಯನ್ನು ಹಾನಿಯೆಂದು ಪರಿಗಣಿಸಬೇಕು. ಭೂಮಿ ಹಾನಿ ಮತ್ತು ಬೆಳೆಹಾನಿಯನ್ನು ಸಮೀಕ್ಷೆಯ ಮೂಲಕ ಅತ್ಯಂತ ತ್ವರಿತಗತಿಯಲ್ಲಿ ಗುರುತಿಸಿ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ಪರಿಹಾರಧನ ಹಾಗೂ ವ್ಯವಸ್ಥೆಗಳನ್ನು ಮಾಡಬೇಕು. ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ ಬೆಳೆ ವಿಮೆಯನ್ನು ಅಳವಡಿಸಬೇಕು.**
- **ಸೇವೆಗಳು:**
  - *ಸಮಸ್ಯೆ:* ಶಾಲಾ ಕೊಠಡಿಗಳು ಬಿದ್ದುಹೋಗಿವೆ ಅಥವ ಶಿಥಿಲಗೊಂಡಿವೆ. ಶಾಲೆಯ ಕೊಠಡಿಯ ಅಭಾವದಿಂದಾಗಿ ಪಾಶ್ಚಾಪುರದಲ್ಲಿ ವೇಳಾ ಪಟ್ಟಿಯನ್ನು ಅರ್ಧಕ್ಕೆ ನಿಲ್ಲಿಸಿ, ಎರಡು ತಂಡಗಳಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದಾರೆ. ಪಾಶ್ಚಾಪುರದಲ್ಲಿ 2 ಮತ್ತು 3ನೇ ತರಗತಿಯ ಮಕ್ಕಳನ್ನು ಒಂದೇ ಕೋಣೆಯಲ್ಲಿ ಕೂರಿಸಿ ಪಾಠ ಹೇಳುವ ಪ್ರಯತ್ನ ನಡೆಸುತ್ತಿದ್ದಾರೆ. ಈ ಎರಡೂ ಕಡೆ ಮಕ್ಕಳ ಕಲಿಕೆಗೆ ಒದಗಿರುವ ಕಷ್ಟದ ಬಗ್ಗೆ ಹಾಗೂ ಪೂರ್ಣ ಕಲಿಕೆ ಆಗದಿರುವ ಬಗ್ಗೆ ಅತ್ಯಂತ ಗಂಭೀರವಾಗಿ ಸಮಸ್ಯೆಯನ್ನು ಎತ್ತಿದ್ದಾರೆ. ಆರೋಗ್ಯ ಉಪಕೇಂದ್ರಗಳಿಲ್ಲ. (ಮಾಸ್ಕೇನಹಟ್ಟಿ ಮತ್ತು ಮಂಗೇನಕೊಪ್ಪ) ಮತ್ತು ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿಗಳ ವ್ಯವಸ್ಥೆಯಿಲ್ಲ ಮತ್ತು ಇರುವ ಕಡೆ ಸೇವೆಗಳು ಸರಿಯಾಗಿ ದೊರಕುತ್ತಿಲ್ಲ. ಈಗ ಶಾಲೆಗಳಿಗೆ ಸರ್ಕಾರದಿಂದ ರೂ 25,000/– ಅನುದಾನವನ್ನು ನೀಡುತ್ತಿದ್ದು ವಾರ್ಷಿಕವಾಗಿ ಈ ಅನುಧಾನವು ಶಾಲೆಯ ವಿವಿಧ ಕಾರ್ಯಕ್ರಮಗಳು ಮತ್ತು ಶಾಲಾ ನಿರ್ವಹಣೆಗೆ ಬಳಕೆಯಾಗುತ್ತಿದ್ದು, ಈ ಹಣದಲ್ಲಿ ಶಾಲಾ ದುರಸ್ತಿ ಕಾರ್ಯವನ್ನು ಮಾಡುವುದು ಕಷ್ಟವಾಗುತ್ತದೆ. ನಾವು ಕಂಡಂತಹ ತಾಲೂಕುಗಳಲ್ಲಿ ಜನರಿಗೆ ಗ್ರಾಮ ಪಂಚಾಯತ್‌ನ ಸ್ಪಂದನೆ ಕನಿಷ್ಠ ಮಟ್ಟದ್ದಾಗಿದೆ ಎಂಬ ಅಭಿಪ್ರಾಯವಿದೆ. ಉದಾಹರಣೆಗೆ ಮಣಗುತ್ತಿಯಲ್ಲಿ ಸಂಪೂರ್ಣವಾಗಿ ಮನೆ ಕಳೆದುಕೊಂಡ ಇಬ್ಬರು ವೃದ್ಧರಿಗೆ ಯಾವುದೇ ಬೆಂಬಲ ಸಿಕ್ಕಿಲ. ನೆರೆ ಬರುವ ಸಂದರ್ಭದಲ್ಲಿ ಮಣಗುತ್ತಿಯಲ್ಲಿ ಯಾವುದೇ ಪೂರ್ವ ಸೂಚನೆಯನ್ನು ನೀಡಿರಲಿಲ್ಲ. ಇದರಿಂದಾಗಿ ಜನರಿಗೆ ಆತಂಕ ಹೆಚ್ಚಾಗಿ ಯಾವುದೇ ಪೂರ್ವ ತಯಾರಿಗಳಿಲ್ಲದೇ ಮನೆಮಠ ಬಿಡುವ ಪರಿಸ್ಥಿತಿ ಉಂಟಾಗಿದೆ. ಪಾಶ್ಚಾಪುರದ ಒಂದು ಕುಟುಂಬದಲ್ಲಿ ನೆರೆಯ ಸಂದರ್ಭದಲ್ಲಿ ಸಹಾಯ ಒದಗಿಸು ಪರವೂರಿನಿಂದ ಬಂದ ಯುವಕನೊಬ್ಬ ಆಕಸ್ಮಿಕವಾಗಿ ಮುಳುಗಿ ಮರಣ ಹೊಂದಿದ್ದಾರೆ. ಆದರೆ ಅವರ ಕುಟುಂಬಕ್ಕೆ ಕೇವಲ 25,000/– ರೂಗಳ ಪರಿಹಾರ ಸಿಕ್ಕಿದೆ. ಆದೇಶದನ್ವಯ ಕಡ್ಡಾಯವಾಗಿ ನಡೆಯಬೇಕಾಗಿರುವ ಗ್ರಾಮ ಪಂಚಾಯತ್ ಮಟ್ಟದ ಕೆ.ಡಿ.ಪಿ. ಸಭೆಗಳು ನಡೆಯುತ್ತಿಲ್ಲ (ಉದಾಹರಣೆಗೆ ಪಾಶ್ಚಾಪುರ).

➢ ***ಪರಿಹಾರ:*** **ಶಾಲೆಯ ಕಟ್ಟಡಗಳ ದುರಸ್ತಿ ಮತ್ತು ನಿರ್ಮಾಣ ಅತ್ಯಂತ ಶೀಘ್ರವಾಗಿ ಆಗಬೇಕು ಇಲ್ಲವಾದಲ್ಲಿ ಮಕ್ಕಳ ಕಲಿಕೆಯು ಕುಂಠಿತಗೊಳ್ಳುತ್ತದೆ. ನ್ಯಾಯಬೆಲೆ ಅಂಗಡಿಗಳ ಆರಂಭವಾಗಬೇಕು. ಆರೋಗ್ಯ ಕೇಂದ್ರಗಳ ಸ್ಥಾಪನೆ ಮತ್ತು ಅಗತ್ಯ ವ್ಯವಸ್ಥೆಗಳನ್ನು ಮಾಡಬೇಕು. ಈಗ ಶಾಲೆಗಳಿಗೆ ಸರ್ಕಾರದಿಂದ ನೀಡುವ ನಿರ್ವಹಣಾ ವೆಚ್ಚವನ್ನು ಹೆಚ್ಚಿಸಬೇಕು. ಸ್ಥಳೀಯ ಸರ್ಕಾರ ಕಡಾಖಂಡಿತವಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲೇಬೇಕು ಅವರಿಗೆ ಪೂರಕವಾಗಿ ಕೆಲಸ ಮಾಡಬೇಕಾದ ಅಧಿಕಾರಿಗಳು ಅವರೊಂದಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಸ್ಥಳೀಯ ಸರ್ಕಾರದಿಂದ ವಿಕೋಪಕ್ಕೆ ಮುಂಚಿತವಾಗಿ ಮುನ್ಸೂಚನೆಯನ್ನು ಅಗತ್ಯವಾಗಿ ನೀಡಬೇಕು ಜೊತೆಗೆ ಕಾಳಜಿ ಕೇಂದ್ರಗಳು ಹಾಗೂ ಗಂಜಿಕೇಂದ್ರಗಳನ್ನು ಮುಂಚಿತವಾಗಿಯೇ ನಿರ್ಮಿಸಿ ಅದರ ಬಗ್ಗೆ ಜನರಿಗೆ ಮಾಹಿತಿಯನ್ನು ನೀಡಬೇಕು. ಪಾಶ್ಚಾಪುರದಲ್ಲಿ ತನ್ನಮಗನನ್ನು ಕಳೆದುಕೊಂಡ ಈ ಕುಟುಂಬಕ್ಕೆ ಸಂಪೂರ್ಣ ಪರಿಹಾರಧನವನ್ನು ನೀಡಬೇಕು. ಎಲ್ಲಾ ಪಂಚಾಯತ್‌ಗಳಲ್ಲಿ ಕೆ.ಡಿ.ಪಿ. ಸಭೆಗಳನ್ನು ನಡೆಸಬೇಕು. ಮಾರ್ಗದರ್ಶಿಯಲ್ಲಿ ಸೂಚಿಸಿರುವಂತೆ ಎಲ್ಲಾ ಪದಾಧಿಕಾರಿಗಳನ್ನು ಕರೆಯಬೇಕು. ಮಳೆಯಿಂದಾಗಿ ಕೈ ಕಳೆದುಕೊಂಡ ವ್ಯಕ್ತಿಗೆ ಪರಿಹಾರ ಧನ ಮಂಜೂರು ಮಾಡಬೇಕು.**

- <u>ವ್ಯವಸ್ಥೆಗಳು:</u>

➢ *ಸಮಸ್ಯೆ:* ನೆರೆಯಿಂದ ರಸ್ತೆಯು ಹಾಳಾಗಿದೆ ಮತ್ತು ಬಸ್ ಸಂಚಾರದ ವ್ಯವಸ್ಥೆಯಿಲ್ಲ. ಹಾಗಾಗಿ ಮಾಸ್ಕೇನಹಟ್ಟಿಯಲ್ಲಿ ನಾಲ್ಕು ಹೆಣ್ಣು ಮಕ್ಕಳು ಹಾಗೂ ನಾಲ್ಕು ಗಂಡು ಮಕ್ಕಳು ಪ್ರೌಢ ಶಾಲಾ ಶಿಕ್ಷಣವನ್ನು ನಿಲ್ಲಿಸಿದ್ದಾರೆ. ಉಳಿದ 20 ಮಕ್ಕಳು ಶಾಲೆ ಮುಗಿಸಿ ಮನೆಗೆ ಬರುವಾಗ ರಾತ್ರಿ 9 ಗಂಟೆಯಾಗುತ್ತಿದೆ ಹಾಗಾಗಿ ಅವರೂ ಕೂಡ ಶಾಲಾ ಶಿಕ್ಷಣ ನಿಲ್ಲಿಸುವ ಸಾಧ್ಯತೆ ಹೆಚ್ಚಿದೆ. ತೀವ್ರವಾದ ಮಳೆ ಬಂದರೂ ಕೂಡ ಅದನ್ನು ಸಂಗ್ರಹಿಸಿಡುವ ಪೂರಕವಾದ ವ್ಯವಸ್ಥೆಗಳಿಲ್ಲದೇ ಇರುವುದರಿಂದ ನೀರಿನ ಅಭಾವ ಕಾಡುತ್ತಿದೆ. ಮುಂದಿನ ಕೆಲವು ತಿಂಗಳುಗಳಲ್ಲಿ ಬರವನ್ನು ಅನುಭವಿಸುವ ಸಾಧ್ಯತೆಯಿದೆ.

➢ ***ಪರಿಹಾರ:*** **ಮಾಸ್ಕೇನಹಟ್ಟಿಯ ಗೋಮಾರಹಳ್ಳಕ್ಕೆ ಸೇತುವೆಯಿಲ್ಲದ ಕಾರಣ ಅನೇಕ ಕೃಷಿಕರು 15 ದಿನಗಳ ಕಾಲ ನೆರೆಯಲ್ಲಿ ಸಿಲುಕಿಕೊಂಡಿದ್ದರು. ಈ ದಾರಿಯಲ್ಲಿಯೇ ಜನರು ಅಗತ್ಯವಿರುವ ಹಾಲು, ದಿನಸಿ ಸಾಮಾನು ಮುಂತಾದ ಪದಾರ್ಥಗಳನ್ನು ಕೊಳ್ಳಲು ಪಕ್ಕದ ಹಳ್ಳಿಯಾದ ಸೋನನಹಟ್ಟಿಗೆ ಹೋಗಬೇಕು, ಮತ್ತು ಈ ದಾರಿಯನ್ನು ಬಳಸಿ ಶಿಕ್ಷಕರು ಶಾಲೆಗೆ ಬರುತ್ತಾರೆ. ಹಾಗಾಗಿ ನೆರೆಯಿಂದ ಇವರೆಲ್ಲರೂ ತೀವ್ರವಾದ ಸಮಸ್ಯೆಯನ್ನು ಅನುಭವಿಸಿದ್ದಾರೆ. ಅಲ್ಲಿ ಮತ್ತೊಮ್ಮೆ ಮಳೆ ಬಂದಲ್ಲಿ ಈ ಸಮಸ್ಯೆ ಪುನರಾವರ್ತಿಸುವುದರಲ್ಲಿ ಯಾವುದೇ ಸಂಶಯವಿಲ್ಲ.**

- <u>ಮಕ್ಕಳಿಗೆ ಸಂಬಂಧಿಸಿದ ಇತರ ಸಮಸ್ಯೆಗಳು:</u>

➢ *ಸಮಸ್ಯೆ:* ಮಕ್ಕಳ ಗ್ರಾಮ ಸಭೆ ಆಗದೇ ಇರುವುದು, ಗ್ರಾಮ ಸಭೆಗಳು ಆದ ಕಡೆಗಳಲ್ಲಿ ದುಡಿಯುವ ಮಕ್ಕಳ, ಹದಿಹರೆಯದವರ ಅನುಕೂಲಕ್ಕೆ ತಕ್ಕಂತೆ ಸಭೆಗಳು ನಡೆಯದೇ ಇರುವುದರಿಂದ ಭಾಗವಹಿಸಲು ಸಾಧ್ಯವಾಗದಿರುವುದು. ಗ್ರಾಮ ಪಂಚಾಯತ್‌ನಿಂದ ದೂರವಿರುವ ಮಕ್ಕಳಿಗೆ ಇದರಲ್ಲಿ ಭಾಗವಹಿಸಲು ಸಾಧ್ಯವಾಗದಿರುವುದು. 14ವರ್ಷ ಮೇಲ್ಪಟ್ಟ ಮಕ್ಕಳಿಗೆ ಯಾವುದೇ ವೃತ್ತಿ ತರಬೇತಿ ಹಾಗೂ ಸುಭದ್ರ ವೃತ್ತಿಯ ಅವಕಾಶಗಳಿಲ್ಲ ಹಾಗಾಗಿ ವಿಟ್ಟ ಖಾನಾಪೂರ ಮತ್ತು ಕೊಲ್ಲಾಪುರಕ್ಕೆ ವಲಸೆ ಹೋಗುತ್ತಿದ್ದಾರೆ. ಪ್ರೌಢ ಶಾಲೆಯಲ್ಲಿ ನೀಡುವ ಮಧ್ಯಾಹ್ನದ ಊಟದ ಗುಣಮಟ್ಟ ತುಂಬಾ ಕೆಟ್ಟದಾಗಿದೆ ಹಾಗೂ ಊದ ಜೊತೆಗೆ ಮೊಟೆಯನ್ನು ಇರುವುದಿಲ್ಲ. ಶಾಲೆಗಳಲ್ಲಿ ಶೌಚಾಲಯಗಳು ಉಪಯೋಗಕ್ಕೆ ಬರುತ್ತಿಲ್ಲ. ನೀರಿನ ಅಭಾವವೂ ಇದೆ. ಬೆಳಗಾವಿ ಜಿಲ್ಲೆಯಲ್ಲಿ ಬಾಲ್ಯವಿವಾಹದ ಅನೇಕ ಪ್ರಕರಣಗಳಿರುವುದನ್ನು ಸ್ಥಳೀಯ ಸರ್ಕಾರಗಳು ನಮ್ಮ ಗಮನಕ್ಕೆ ತಂದಿದ್ದಾರೆ.

➢ ***ಪರಿಹಾರ:*** **ರಸ್ತೆಗಳ ನಿರ್ಮಾಣ ಮತ್ತು ಬಸ್ ಸಂಚಾರದ ವ್ಯವಸ್ಥೆಯನ್ನು ಮಾಡುವುದು. ಮಾಸ್ಕೇನಹಟ್ಟಿಯ ಗೋಮಾರಿಹಳ್ಳಕ್ಕೆ ಸೇತುವೆಯ ನಿರ್ಮಾಣ ಶೀಘ್ರವಾಗಿ ಆಗಬೇಕು. ಮಕ್ಕಳ ಗ್ರಾಮ ಸಭೆ 2007ರ ಮಾರ್ಗದರ್ಶಿಯನುಸಾರ ನಡೆಯಲೇಬೇಕು. ಈ ಮಕ್ಕಳ ಗ್ರಾಮ ಸಭೆಯಲ್ಲಿ ಎಲ್ಲಾ ಮಕ್ಕಳು, ವಿಶೇಷವಾಗಿ ದುಡಿಯುವ ಮಕ್ಕಳು, ಅಂಗವಿಕಲ ಮಕ್ಕಳು, ಬಾಲ್ಯ ವಿವಾಹ ಅನುಭವಿಸಿರುವ ಮಕ್ಕಳು, ಇವರೆಲ್ಲರ ಭಾಗವಹಿಸುವಿಕೆಯನ್ನು ಖಚಿತಗೊಳಿಸಬೇಕು. ಅವರಿಗೆ ಸೂಕ್ತವಾದ ಸ್ಥಳ ಹಾಗೂ ಸಮಯ ನಿಗದಿಯಾಗಬೇಕು. 14 ವರ್ಷ ಮೇಲ್ಪಟ್ಟ ಮಕ್ಕಳು ಕಾನೂನಿನ್ವಯ ಸುಭದ್ರ ಕೆಲಸಗಳಲ್ಲಿ ತೊಡಗಿಕೊಳ್ಳಬಹುದು. ಅವರಿಗೆ ಅಗತ್ಯವಿರುವ ವೃತ್ತಿತರಬೇತಿಗಳು, ಕೆಲಸದ ಅವಕಾಶಗಳು, ಕೆಲಸದಲ್ಲಿ ಸುರಕ್ಷತೆ ಹಾಗೂ ಕಾರ್ಮಿಕರ ಹಕ್ಕುಗಳನ್ನು ಒದಗಿಸಬೇಕು. ಈಗ ಸರ್ಕಾರದ ವತಿಯಿಂದ 18 ವರ್ಷ ಮೇಲ್ಪಟ್ಟವರಿಗೆ ನೀಡುತ್ತಿರುವ ವೃತ್ತಿ ತರಬೇತಿ ಹಾಗೂ ವಿದ್ಯಾರ್ಥಿ ವೇತನಗಳನ್ನು ವಿಮರ್ಶಿಸಿ ಅವುಗಳಲ್ಲಿ ಯಾವುದು ಸೂಕ್ತವೋ ಅದನ್ನು 14 ವರ್ಷ ಮೇಲ್ಪಟ್ಟವರಿಗೂ ಕೂಡ ದೊರೆಯುವಂತೆ ಮಾಡಬೇಕು. ಪ್ರೌಢ ಶಾಲೆಯಲ್ಲಿ ನೀಡುತ್ತಿರುವ ಊಟದ ವಿಮರ್ಶೆಯಾಗಿ ಗುಣಮಟ್ಟದ ಊಟವನ್ನು ಒದಗಿಸಬೇಕು. ಶೌಚಾಲಯಗಳ ನಿರ್ಮಾಣವಾಗಬೇಕು ಹಾಗೂ ನೀರು ಸರಬರಾಜನ್ನು ಖಾತ್ರಿಗೊಳಿಸಬೇಕು. ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಆಗಿರುವ ಕಾನೂನಿನ ತಿದ್ದುಪಡಿಯನ್ನು ವ್ಯಾಪಕವಾಗಿ ಜನರಿಗೆ ತಲುಪಿಸಬೇಕು. ಕೇವಲ ಬಾಲ್ಯವಿವಾಹಗಳನ್ನು ಅವು ನಡೆಯುವ ಸಂದರ್ಭದಲ್ಲಿ ನಿಲ್ಲಿಸುವುದಲ್ಲ ಮಕ್ಕಳಿಗೆ ಪರ್ಯಾಯ ವ್ಯವಸ್ಥೆಗಳನ್ನು ನ್ಯಾ. ಶಿವರಾಜ ಪಾಟೀಲ್ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಮಕ್ಕಳಿಗೆ ಒದಗಿಸಲೇಬೇಕು.**

- **<u>ದೊಡ್ಡವರಿಗೆ ಸಂಬಂಧಿಸಿದ ಇತರ ಸಮಸ್ಯೆಗಳು:</u>**
  - *ಸಮಸ್ಯೆ:* ನರೇಗ ಕಾರ್ಯಕ್ರಮದಲ್ಲಿ ದುಡಿಯುವ ಕೂಲಿ ಕಾರ್ಮಿಕರಿಗೆ ಕೂಲಿ ಸಮಯಕ್ಕೆ ಸರಿಯಾಗಿ ಸಿಗದೇ ಇರುವುದರಿಂದ ಅವರು ಕೆಲಸ ಅರಸಿ ವಲಸೆ ಹೋಗುತ್ತಿದ್ದಾರೆ. ನೆರೆ ಪ್ರದೇಶದಲ್ಲಿ ನರೇಗ ಕಾರ್ಯಕ್ರಮ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವ ಬಗ್ಗೆ ಕಾರ್ಮಿಕರಿಗೆ ಸ್ಪಷ್ಟತೆಯಿಲ್ಲ. ನರೇಗಾ ಕಾರ್ಯಕ್ರಮದಲ್ಲಿ ಈಗ ಕುಟುಂಬಕ್ಕೆ ಇರುವ 100 ದಿನಗಳ ಕೆಲಸ ಸಾಲುತ್ತಿಲ್ಲ.
  - ***ಪರಿಹಾರ:*** **ನರೇಗಾ ಕಾರ್ಯಕ್ರಮದಲ್ಲಿ ಕೆಲಸಕ್ಕೆ ಸರಿಯಾದ ಕೂಲಿ ಸೂಕ್ತ ಸಮಯದಲ್ಲಿ ಸಿಗಬೇಕು. ಬೆಳಗಾವಿಯಲ್ಲಿ ನೆರೆ ಪೀಡಿತ ಪ್ರದೇಶಗಳಲ್ಲಿ ನರೇಗಾಕ್ಕೆ 150 ದಿನಗಳು ಸ್ಯಾಂಕ್ಷನ್ ಮಾಡಲಾಗಿದೆ. ಪ್ರತಿ ಕುಟುಂಬಕ್ಕೆ ನೀಡುವ 1 ದಿನಗಳ ಬದಲಿಗೆ ಪ್ರತಿ ವ್ಯಕ್ತಿಗೆ 100 ದಿನಗಳ ಕೆಲಸವನ್ನು ನೀಡಬೇಕು.**

**ಈ ಎಲ್ಲಾ ವಿಷಯಗಳನ್ನು ಒಳಗೊಂಡಂತಹ ವಿಕೋಪ ನಿರ್ವಹಣಾ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆಯನ್ನು ಅತ್ಯಂತ ಶೀಘ್ರವಾಗಿ ರೂಪಿಸಿ, ಜಿಲ್ಲೆಯ ಎಲ್ಲಾ ನೆರೆಯಿಂದ ಸಂಕಷ್ಟಕೊಳಗಾದ ಮಕ್ಕಳು ಹಾಗೂ ಕುಟುಂಬಗಳ ಅಗತ್ಯಗಳಿಗೆ ಸ್ಪಂಧಿಸಿ ಸಮಗ್ರವಾಗಿ ಜಾರಿಗೆ ತರಲೇಬೇಕು. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಾಗೂ ತುರ್ತು ಪರಿಹಾರಕ್ರಮಗಳನ್ನು ಕೈಗೊಳ್ಳುವಲ್ಲಿ ಎಲ್ಲಾ ಹಂತದ ಸರ್ಕಾರಗಳ ಜವಾಬ್ದಾರಿಯಿದ್ದು, ಆಯಾ ಹಂತದ ಸರ್ಕಾರಗಳು ಹಾಗೂ ಅಧಿಕಾರಿಗಳು ಶೀಘ್ರವಾಗಿ ಕಾರ್ಯಪ್ರವೃತ್ತರಾಗಬೇಕಾದ ಅನಿವಾರ್ಯತೆಯೂ ಇದೆ. ನೆರೆಯಿಂದ ಬದುಕು ಕಳೆದುಕೊಂಡವರ ಜೀವನವನ್ನು ಕಟ್ಟಲು ಈಗಾಗಲೇ ಆರಂಭಿಸಿರುವ ಕಾರ್ಯಗಳು ವೇಗವನ್ನು ಪಡೆದುಕೊಳ್ಳಬೇಕು ಹಾಗೂ ಆಗಬೇಕಾದ ಕಾರ್ಯಗಳ ಆರಂಭಕ್ಕೆ ಮೀನ ಮೇಷ ಎಣಿಸುತ್ತಿರುವುದನ್ನು ನಿಲ್ಲಿಸಿ ತಕ್ಷಣದಿಂದಲೇ ಕ್ರಮ ಕೈಗೊಳ್ಳಬೇಕು ಎನ್ನುವುದು ನಮ್ಮ ಹಕ್ಕೊತ್ತಾಯ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಕವಿತಾ ರತ್ನ: +91 9448990480
ನಿರ್ದೇಶಕಿ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

ಶಾರದಾ ಗೋಪಾಲ್: +91 9902840033
ಜಾಗೃತ ಮಹಿಳಾ ಒಕ್ಕೂಟ

ಶಿವಾಜಿ ಕಾಗಣಿಕರ್

ವಿಶ್ವೇಶ್ವರಯ್ಯ ಹಿರೇಮಠ್: +91 9341062808